# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 513 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಸ್.ಎಲ್.ಭೋಜೇಗೌಡ |
| ಉತ್ತರಿಸುವ ದಿನಾಂಕ | : | 08-12-2023 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯದ ವಿವಿಧ ಬಾಲಕರ ಮತ್ತು ಬಾಲಕಿಯರ ವಸತಿ ನಿಲಯಗಳ ಸಂಖ್ಯೆ ಎಷ್ಟು ಈ ವಸತಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ಈ ವಸತಿ ನಿಲಯಗಳಲ್ಲಿ ಪ್ರವೇಶ ಪಡೆದು ವಾಸಿಸುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ 1226 ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳನ್ನು ಹಾಗೂ 680 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ, ವಿವರ ಕೆಳಕಂಡಂತಿದೆ. (ತಾಲ್ಲೂಕುವಾರು ವಿವರವನ್ನು ಅನುಬಂಧ – 1 ಮತ್ತು 2 ರಲ್ಲಿ ನೀಡಿದೆ.)
<table>
<tr><th rowspan="2">ಕ್ರ. ಸಂ</th><th rowspan="2">ನಿಲಯಗಳ ವಿವರ</th><th colspan="3">ವಿದ್ಯಾರ್ಥಿ ನಿಲಯಗಳ ಸಂಖ್ಯೆ</th></tr>
<tr><th>ಬಾಲಕರು</th><th>ಬಾಲಕಿಯರು</th><th>ಒಟ್ಟು</th></tr>
<tr><td>01</td><td>ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು</td><td>927</td><td>299</td><td>1226</td></tr>
<tr><td>02</td><td>ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳು</td><td>399</td><td>281</td><td>680</td></tr>
<tr><td></td><td>ಒಟ್ಟು :-</td><td>1326</td><td>580</td><td>1906</td></tr>
</table>
ರಾಜ್ಯದ ವಿವಿಧ ಬಾಲಕರ ಮತ್ತು ಬಾಲಕಿಯರ ವಸತಿ ನಿಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ತಾಲ್ಲೂಕುವಾರು ಸಂಪೂರ್ಣ ಮಾಹಿತಿಯನ್ನು ಅನುಬಂಧ-3ರಲ್ಲಿ ನೀಡಿದೆ.</td></tr>
<tr><td>ಆ)</td><td>ಸರ್ಕಾರದ ವಿವಿಧ ವಸತಿ ನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಉಟೋಪಚಾರಗಳಿಲ್ಲದೇ ಇರುವುದು ಮತ್ತು ಕೊಠಡಿಗಳು ಹಾಗೂ ಶೌಚಾಲಯಗಳು</td><td>ಬಂದಿದೆ.<br>ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿನಿಲಯಗಳಲ್ಲಿನ ಗುಣಮಟ್ಟವನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>➢ ಸರ್ಕಾರದ ಆದೇಶ ಸಂಖ್ಯೆ: ಸಕಇ 55 ಪಕವಿ 2023 ಬೆಂಗಳೂರು ದಿನಾಂಕ: 05-05-2023 ರಲ್ಲಿ ಪ್ರತಿ ನಿಲಯದಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿಯೇ Mess Committee ಅನ್ನು ರಚಿಸಿ, ಗುಣಮಟ್ಟ</td></tr>
</table>

| | | |
|---|---|---|
| | ಸ್ವಚ್ಚತೆಯಿಂದ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕಾಯ್ದುಕೊಳ್ಳಲಾಗಿರುತ್ತದೆ. ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿನ ಶೌಚಾಲಯ ಸ್ವಚ್ಚತೆ ಹಾಗ ನೈರ್ಮಲ್ಯದ ಕುರಿತಾಗಿ Sanitazition committee ಯನ ರಚಿಸಲಾಗಿರುತ್ತದೆ. |
| ಇ) | ಬಂದಿದ್ದಲ್ಲಿ, ವಸತಿ ನಿಲಯದ ಅಭ್ಯರ್ಥಿಗಳಿಗೆ ಗುಣಮಟ್ಟದ ಊಟೋಪಚಾರದ ವ್ಯವಸ್ಥೆ ಕೊಠಡಿ ಮತ್ತು ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? | ➢ ಇಲಾಖೆಯ ಸರ್ಕಾರಿ ವಸತಿ ಶಾಲೆ ಮತ್ತು ಮೆಟ್ರಿಕ್ ಪೂವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟ ಊಟೋಪಚಾರವನ್ನು ನೀಡಲು ಮೂರು ವಿಭಾಗವಾ (ಕರಾವಳಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನ ಪರಿಷ್ಕೃತ ಮೆನು ಚಾರ್ಟ್ ನಂತೆ ವಿದ್ಯಾರ್ಥಿಗಳಿ ಊಟೋಪಚಾರವನ್ನು ನೀಡಲಾಗುತ್ತಿದೆ.<br>➢ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ ಸರಬರಾಜು ಮಾಡುವ ಬಗ್ಗೆ ಪರಿಷ್ಕೃತ ಆದೇಶವನ ಹೊರಡಿಸಲಾಗಿದೆ. (ಸರ್ಕಾರದ ಆದೇಶ ಸಂಖ್ಯೆ: ಸಕಇ ೯ ಪಕವಿ 2023. ದಿನಾಂಕ: 28-07-2023)<br>➢ ಈ ಕಛೇರಿ ಸುತ್ತೋಲೆ ಸಂಖ SWD/EDU/ED7/20/2023/1065640 ರಲ್ಲಿ Freak Ra ನಮೂದಿಸುವ Bidದಾರರನ್ನು ತಿರಸ್ಕರಿಸಲು ಮಾರ್ಗಸೂ ಹೊರಡಿಸಲಾಗಿರುತ್ತದೆ.<br>➢ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: 198 ಆರ್ &ಐ 202 ದಿನಾಂಕ: 22-11-2023 ರನ್ವಯ ಪ್ರತಿ ಜಿಲ್ಲೆಗೂ ರಾ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾ ನಿಯೋಜನೆ ಮಾಡಲಾಗಿರುತ್ತದೆ.<br>➢ ಈ ಕಛೇರಿ ಸುತ್ತೋಲೆ ಸಂಖ್ಯೆ:SWD/ EDU/ ED7/20/ 202 1065640, ದಿನಾಂಕ:07-10-2023ರಲ್ಲಿ ಗುತ್ತಿಗೆದಾರ ಸರಬರಾಜು ಮಾಡುವ ಆಹಾರ ಪದಾರ್ಥಗ ಮಾದರಿಗಳನ್ನು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟ ಕಛೇರಿಗಳಲ್ಲಿ ಪ್ರದರ್ಶಿಸಲು ಸುತ್ತೋ ಹೊರಡಿಸಲಾಗಿರುತ್ತದೆ.<br>➢ ಜಿಲ್ಲಾ ಮಟ್ಟದ ಅಧಿಕಾರಿಗಳು ಖುದ್ದು ಭೇಟಿ ನೀ ರುಚಿ/ಸಾಧಾರಣ ರುಚಿ ಹೊಂದಿರುವ ನಿಲಯಗಳಿಗೆ ಭೇ ನೀಡಿದ ಸಮಯದಲ್ಲಿ Taste Rigister ನಲ್ಲಿ ನಮೂದಿ ಕೇಂದ್ರ ಕಛೇರಿಗೆ ವರದಿ ಮಾಡಲು ಆಯುಕ್ತರು, ಸಮಾ ಕಲ್ಯಾಣ ಇಲಾಖೆ ರವರು ಸುತ್ತೋಲೆ ಹೊರಡಿಸಲಾಗಿ (SWD/ SCHC/ SC/ 23/ 2023/ 118413 ದಿನಾಂಕ: 19-09-2023 ರಲ್ಲಿ ಆದೇಶ ಹೊರಡಿಸಿರುತ್ತಾರೆ. |

| | | |
|---|---|---|
| | | ➢ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಸಂಬಂಧ ರಾಜ್ಯವಲಯದಿಂದ ನಿಲಯಗಳಿಗೆ ಅಗತ್ಯವಿರುವ ಸಾಮಗ್ರಿಗಳಾದ ಟೂ ಟಯರ್ ಕಾಟ್, ಸೋಲಾರ್ ವಾಟರ್ ಹೀಟರ್, ಡೈನಿಂಗ್ ಟೇಬಲ್, ಡೀಸೆಲ್ ಜನರೇಟರ್, ಕಾಯರ್ ಮ್ಯಾಟ್ರಸ್ ಮತ್ತು ಪಿಲ್ಲೋ, ಸಿಸಿಟಿವಿ ಕ್ಯಾಮರಾಗಳನ್ನು ಕೆಟಿಪಿಪಿ ನಿಯಮಾವಳಿಗಳನ್ವಯ ಇ-ಟೆಂಡರ್ ಮೂಲಕ ಖರೀದಿಸಿ ಪೂರೈಸಲಾಗುತ್ತಿದೆ.<br>➢ ವಿದ್ಯಾರ್ಥಿ ನಿಲಯಗಳಲ್ಲಿ ಅಗತ್ಯವಿರುವ ಇತರೆ ಮೂಲಭೂತ ಸಾಮಗ್ರಿಗಳಾದ ಯುಪಿಎಸ್, ವಾಟರ್ ಪ್ಯೂರಿಫೈರ್, ಲೈಬ್ರರಿ ಬುಕ್ಸ್, ಕ್ರೀಡಾ ಸಾಮಗ್ರಿಗಳು, ಇನ್ಸಿನೇಟರ್, ಬೆಂಕಿ ನಂದಿಸುವ ಉಪಕರಣ, ಪಾತ್ರೆ ಪರಿಕರಗಳು ಹಾಗೂ ಇತರೆ ತುರ್ತು ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾಮಟ್ಟದಲ್ಲಿ ಅನುಷ್ಠಾನಗೊಳಿಸಲು ಅನುದಾನವನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. |

**ಸಕಇ 231 ಪಕವಿ 2023**

**(ಡಾ ಹೆಚ್.ಸಿ ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು

# ಅನುಬಂಧ–1

## 2( 3–24ನೇ ಸಾಲಿಗೆ ಇಲಾಖೆಯ ಸರ್ಕಾರಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಜಿಲ್ಲಾವಾರು ವಿವರ

| ಕ್ರಸಂ | ಜಿಲ್ಲೆಯ ಹೆಸರು | ವಿದ್ಯಾರ್ಥಿ ನಿಲಯಗಳ ಸಂಖ್ಯೆ | | | ಮಂಜೂರಾತಿ ಸಂಖ್ಯೆ | | | ದಾಖಲಾತಿ ಸಂಖ್ಯೆ | | |
|---|---|---|---|---|---|---|---|---|---|---|
| | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು |
| 1 | ಬಾಗಲಕೋಟೆ | 33 | 11 | 44 | 2180 | 715 | 2895 | 3318 | 1129 | 4447 |
| 2 | ಬೆಂಗಳೂರು (ಗ್ರಾ) | 18 | 5 | 23 | 1420 | 395 | 1815 | 1311 | 381 | 1692 |
| 3 | ಬೆಂಗಳೂರು (ನ) | 16 | 5 | 21 | 1305 | 400 | 1705 | 858 | 216 | 1074 |
| 4 | ಬೆಳಗಾವಿ | 51 | 15 | 66 | 3571 | 998 | 4569 | 4521 | 1626 | 6147 |
| 5 | ಬಳ್ಳಾರಿ | 18 | 4 | 22 | 1790 | 330 | 2120 | 2519 | 733 | 3252 |
| 6 | ಬೀದರ | 34 | 8 | 42 | 2655 | 645 | 3300 | 2529 | 749 | 3278 |
| 7 | ಚಾಮರಾಜನಗರ | 29 | 11 | 40 | 2315 | 965 | 3280 | 1355 | 448 | 1803 |
| 8 | ಚಿಕ್ಕಬಳ್ಳಾಪುರ | 39 | 10 | 49 | 3500 | 1100 | 4600 | 3217 | 823 | 4040 |
| 9 | ಚಿಕ್ಕಮಗಳೂರು | 26 | 12 | 38 | 2145 | 1080 | 3225 | 1524 | 876 | 2400 |
| 10 | ಚಿತ್ರದುರ್ಗ | 37 | 15 | 52 | 2530 | 965 | 3495 | 2958 | 1264 | 4222 |
| 11 | ದಕ್ಷಿಣಕನ್ನಡ | 11 | 8 | 19 | 690 | 560 | 1250 | 542 | 455 | 997 |
| 12 | ದಾವಣಗೆರೆ | 29 | 9 | 38 | 2080 | 654 | 2734 | 1967 | 845 | 2812 |
| 13 | ಧಾರವಾಡ | 9 | 5 | 14 | 600 | 350 | 950 | 624 | 427 | 1051 |
| 14 | ಗದಗ | 21 | 5 | 26 | 1475 | 370 | 1845 | 1491 | 658 | 2149 |
| 15 | ಹಾಸನ | 42 | 17 | 59 | 2808 | 1410 | 4218 | 2659 | 1129 | 3788 |
| 16 | ಹಾವೇರಿ | 29 | 8 | 37 | 2140 | 555 | 2695 | 2660 | 1186 | 3846 |
| 17 | ಕಲಬುರಗಿ | 62 | 10 | 72 | 4650 | 720 | 5370 | 4598 | 973 | 5571 |
| 18 | ಕೊಡಗು | 10 | 7 | 17 | 525 | 335 | 860 | 445 | 294 | 739 |
| 19 | ಕೋಲಾರ | 38 | 14 | 52 | 3047 | 1255 | 4302 | 2174 | 901 | 3075 |
| 20 | ಕೊಪ್ಪಳ | 26 | 7 | 33 | 1990 | 520 | 2510 | 3439 | 1320 | 4759 |
| 21 | ಮಂಡ್ಯ | 33 | 13 | 46 | 2302 | 1180 | 3482 | 1359 | 565 | 1924 |
| 22 | ಮೈಸೂರು | 36 | 11 | 47 | 2415 | 860 | 3275 | 1811 | 630 | 2441 |
| 23 | ರಾಯಚೂರು | 35 | 11 | 46 | 2605 | 760 | 3365 | 5909 | 1924 | 7833 |
| 24 | ರಾಮನಗರ | 28 | 9 | 37 | 1915 | 590 | 2505 | 1424 | 351 | 1775 |
| 25 | ಶಿವಮೊಗ್ಗ | 35 | 14 | 49 | 2130 | 1020 | 3150 | 2290 | 943 | 3233 |
| 26 | ತುಮಕೂರು | 49 | 13 | 62 | 3598 | 925 | 4523 | 3178 | 1090 | 4268 |
| 27 | ಉಡುಪಿ | 9 | 6 | 15 | 440 | 325 | 765 | 550 | 305 | 855 |
| 28 | ಉತ್ತರ ಕನ್ನಡ | 17 | 9 | 26 | 913 | 500 | 1413 | 987 | 612 | 1599 |
| 29 | ವಿಜಯಪುರ | 46 | 11 | 57 | 3385 | 860 | 4245 | 4950 | 1813 | 6763 |
| 30 | ಯಾದಗಿರಿ | 32 | 6 | 38 | 2145 | 360 | 2505 | 2239 | 477 | 2716 |
| 31 | ವಿಜಯನಗರ | 29 | 10 | 39 | 2935 | 950 | 3885 | 3426 | 2484 | 5910 |
| | ಒಟ್ಟು:– | **927** | **299** | **1226** | **68199** | **22652** | **90851** | **72832** | **27627** | **100459** |

9. ಒಂದು ವೇಳೆ ಆಹಾರ ಪದಾರ್ಥಗಳ ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದ್ದಲ್ಲಿ, ಕಾರ್ಯಾದೇಶ ನೀಡುವ ಸಮಯದಲ್ಲಿ ಈ ಷರತ್ತನ್ನು ಕಡ್ಡಾಯವಾಗಿ ನಮೂದು ಮಾಡಿ, ಕಾರ್ಯಾದೇಶ ಹೊರಡಿಸತಕ್ಕದ್ದು.

ಈ ಮೇಲಿನಂತೆ ಹೊರಡಿಸಲಾಗಿರುವ ಎಲ್ಲಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಿ, ಇಲಾಖಾ ವ್ಯಾಪ್ತಿಯ ನಿಲಯಗಳಿಗೆ ಉತ್ತಮ ಗುಣಮಟ್ಟದ ಆಹಾರ ಸಾಮಗ್ರಿಗಳು ಸರಬರಾಜು ಆಗುವಂತೆ ನೋಡಿಕೊಳ್ಳುವುದು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಸದರಿ ಮಾರ್ಗಸೂಚಿಗಳನ್ನು ಉಲ್ಲಂಘಿಸಿದಲ್ಲಿ ಸಂಬಂಧಪಟ್ಟ ಜಿಲ್ಲೆಯ ಜಂಟಿ / ಉಪನಿರ್ದೇಶಕರು ಹಾಗೂ ತಾಲ್ಲೂಕು ಮಟ್ಟದ ಸಹಾಯಕ ನಿರ್ದೇಶಕರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

Signed by
Rakesh Kumar K
Date: 03.10.2023 13:32:20
ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ
ಬೆಂಗಳೂರು

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
2. ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು, ರವರಿಗೆ ಮಾಹಿತಿಗಾಗಿ
3. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು ರವರಿಗೆ ಮಾಹಿತಿಗಾಗಿ
4. ಎಲ್ಲಾ ಜಿಲ್ಲೆಗಳ ಜಂಟಿ / ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರಿಗೆ ಮುಂದಿನ ಕ್ರಮಕ್ಕಾಗಿ
5. ಎಲ್ಲಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ರವರಿಗೆ, ಮುಂದಿನ ಕ್ರಮಕ್ಕಾಗಿ (ಜಿಲ್ಲಾ ಮಟ್ಟದ ಅಧಿಕಾರಿಗಳ ಮುಖಾಂತರ)
6. ಕಛೇರಿ ಪ್ರತಿ / ಇತರೆ

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಡೆಸಲಾಗುತ್ತಿರುವ ಸರ್ಕಾರಿ ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ನಿಲಯಾರ್ಥಿಗಳಿಗೆ ನೀಡಲಾಗುತ್ತಿರುವ ಆಹಾರ ಪದಾರ್ಥಗಳ ಗುಣಮಟ್ಟವನ್ನು ಉತ್ತಮ ಗುಣಮಟ್ಟದಲ್ಲಿ ಒದಗಿಸಲು ಮಾರ್ಗಸೂಚಿಗಳನ್ನು ಹೊರಡಿಸುವ ಕುರಿತು.

**ಓದಲಾಗಿದೆ:** ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಏಕ ಕಡತದ ಸಂಖ್ಯೆ: SWD/EDU/ED6/92/2023 (E-1070491).

*****

**ಪ್ರಸ್ತಾವನೆ:-**

ಮೇಲೆ ಓದಲಾದ ಏಕ ಕಡತದಲ್ಲಿ, ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ನೀಡಲಾಗುತ್ತಿರುವ ಆಹಾರದ ಗುಣಮಟ್ಟದ ಬಗ್ಗೆ ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿನ ಸ್ವಚ್ಛತೆಯ ಬಗ್ಗೆ ಪದೇ ಪದೇ ದೂರುಗಳು ಸಲ್ಲಿಕೆಯಾಗುತ್ತಿರುತ್ತವೆ. ಸದರಿ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ನಿಲಯಾರ್ಥಿಗಳ ಸಹಭಾಗಿತ್ವದಲ್ಲಿ ವಿದ್ಯಾರ್ಥಿ ನಿಲಯವನ್ನು ನಿರ್ವಹಣೆ ಮಾಡಲು ಸೂಕ್ತವಾಗಿದ್ದು, ಈ ಸಂಬಂಧ ಮಾರ್ಗಸೂಚಿಗಳನ್ನು ಹೊರಡಿಸಲು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರು ಏಕ ಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ನೀಡಲಾಗುತ್ತಿರುವ ಆಹಾರ ಗುಣಮಟ್ಟದ ಬಗ್ಗೆ ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ಕಂಡುಬರುತ್ತಿರುವ ಸ್ವಚ್ಛತೆಯ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲು ನಿರ್ಧರಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಸಕಇ 55 ಪಕವಿ 2023 ಬೆಂಗಳೂರು**
**ದಿನಾಂಕ: 05-05-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸಮಾಜ ಕಲ್ಯಾಣ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ನೀಡಲಾಗುತ್ತಿರುವ ಆಹಾರ ಗುಣಮಟ್ಟದ ಬಗ್ಗೆ ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿ ಕಂಡುಬರುತ್ತಿರುವ ಸ್ವಚ್ಛತೆಯ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಈ ಕೆಳಕಂಡ ಮಾರ್ಗಸೂಚಿಗಳನ್ನು ರಚಿಸಿ ಆದೇಶಿಸಿದೆ.

1. ಪ್ರತಿ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ 2 ಸಮಿತಿಗಳನ್ನು ರಚಿಸುವುದು.
   (A) Mess Committee. (B) Sanitation Committee.

## ಅನುಬಂಧ-2

**20. )-24ನೇ ಸಾಲಿಗೆ ಇಲಾಖೆಯ ಸರ್ಕಾರಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳ ಜಿಲ್ಲಾವಾರು ವಿವರ**

| ಕ್ರಸಂ | ಜಿಲ್ಲೆಯ ಹೆಸರು | ವಿದ್ಯಾರ್ಥಿ ನಿಲಯಗಳ ಸಂಖ್ಯೆ | | | ಮಂಜೂರಾತಿ ಸಂಖ್ಯೆ | | | ದಾಖಲಾತಿ ಸಂಖ್ಯೆ | | |
|---|---|---|---|---|---|---|---|---|---|---|
| | | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು | ಬಾಲಕ | ಬಾಲಕಿ | ಒಟ್ಟು |
| 1 | ಬಾಗಲಕೋಟೆ | 14 | 9 | 23 | 1524 | 750 | 2274 | 2974 | 1518 | 4492 |
| 2 | ಬೆಂಗಳೂರು (ಗ್ರಾ) | 5 | 5 | 10 | 561 | 536 | 1097 | 761 | 515 | 8384 |
| 3 | ಬೆಂಗಳೂರು (ನ) | 19 | 17 | 36 | 2486 | 1480 | 3966 | 3154 | 2279 | 5433 |
| 4 | ಬೆಳಗಾವಿ | 19 | 10 | 29 | 1643 | 865 | 2508 | 2453 | 1439 | 3892 |
| 5 | ಬಳ್ಳಾರಿ | 12 | 6 | 18 | 1392 | 654 | 2046 | 2332 | 1413 | 9634 |
| 6 | ಬೀದರ | 12 | 7 | 19 | 1110 | 585 | 1695 | 1521 | 848 | 2369 |
| 7 | ಚಾಮರಾಜನಗರ | 7 | 9 | 16 | 945 | 848 | 1793 | 638 | 564 | 1202 |
| 8 | ಚಿಕ್ಕಬಳ್ಳಾಪುರ | 15 | 8 | 23 | 2336 | 874 | 3210 | 2247 | 1445 | 3692 |
| 9 | ಚಿಕ್ಕಮಗಳೂರು | 13 | 8 | 21 | 1149 | 704 | 1853 | 1037 | 1297 | 6009 |
| 10 | ಚಿತ್ರದುರ್ಗ | 22 | 17 | 39 | 3288 | 1800 | 5088 | 3240 | 3439 | 6679 |
| 11 | ದಕ್ಷಿಣಕನ್ನಡ | 5 | 6 | 11 | 419 | 475 | 894 | 511 | 628 | 1139 |
| 12 | ದಾವಣಗೆರೆ | 17 | 11 | 28 | 2288 | 1200 | 3488 | 2894 | 2151 | 3581 |
| 13 | ಧಾರವಾಡ | 13 | 7 | 20 | 1493 | 750 | 2243 | 3709 | 1572 | 5281 |
| 14 | ಗದಗ | 12 | 6 | 18 | 1166 | 683 | 1849 | 1149 | 1230 | 2379 |
| 15 | ಹಾಸನ | 16 | 16 | 32 | 1462 | 1419 | 2881 | 2305 | 2893 | 5198 |
| 16 | ಹಾವೇರಿ | 14 | 8 | 22 | 1205 | 650 | 1855 | 1422 | 1316 | 5934 |
| 17 | ಕಲಬುರಗಿ | 22 | 14 | 36 | 2750 | 1450 | 4200 | 4404 | 2726 | 7130 |
| 18 | ಕೊಡಗು | 2 | 2 | 4 | 150 | 150 | 300 | 137 | 179 | 5918 |
| 19 | ಕೊಪ್ಪಳ | 11 | 7 | 18 | 1032 | 625 | 1657 | 2017 | 1481 | 3498 |
| 20 | ಕೋಲಾರ | 13 | 6 | 19 | 1804 | 650 | 2454 | 1314 | 810 | 10628 |
| 21 | ಮಂಡ್ಯ | 11 | 11 | 22 | 990 | 1037 | 2027 | 1102 | 1240 | 6055 |
| 22 | ಮೈಸೂರು | 17 | 17 | 34 | 1667 | 1910 | 3577 | 2239 | 3300 | 5539 |
| 23 | ರಾಯಚೂರು | 17 | 13 | 30 | 2035 | 1225 | 3260 | 4472 | 2967 | 7428 |
| 24 | ರಾಮನಗರ | 7 | 6 | 13 | 515 | 550 | 1065 | 344 | 405 | 749 |
| 25 | ಶಿವಮೊಗ್ಗ | 14 | 14 | 28 | 1735 | 1733 | 3468 | 1525 | 2161 | 3686 |
| 26 | ತುಮಕೂರು | 24 | 15 | 39 | 4163 | 1620 | 5783 | 4070 | 3010 | 10972 |
| 27 | ಉಡುಪಿ | 4 | 4 | 8 | 300 | 300 | 600 | 408 | 328 | 736 |
| 28 | ಉತ್ತರಕನ್ನಡ | 4 | 3 | 7 | 350 | 300 | 650 | 368 | 269 | 637 |
| 29 | ವಿಜಯಪುರ | 11 | 8 | 19 | 1225 | 800 | 2025 | 3710 | 1949 | 5659 |
| 30 | ಯಾದಗಿರಿ | 11 | 4 | 15 | 1095 | 275 | 1370 | 1700 | 617 | 2317 |
| 31 | ವಿಜಯನಗರ | 16 | 7 | 23 | 1796 | 779 | 2575 | 2505 | 1470 | 3975 |
| | ಒಟ್ಟು:- | **399** | **281** | **680** | **46074** | **27677** | **73751** | **62662** | **47459** | **110121** |

| | |
|---|---|
| Sanitation Committee | 1. ಮಾಹೆಯಾನ ಸ್ವಚ್ಛತಾ ಸಾಮಗ್ರಿಗಳು ನಿಲಯಕ್ಕೆ ಸರಬರಾಜಾಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.<br>2. ದಿನಂಪ್ರತಿ ಶೌಚಾಲಯ ಹಾಗೂ ಸ್ನಾನಗೃಹಗಳನ್ನು ಸ್ವಚ್ಛ ಮಾಡುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.<br>3. ನಿಲಯಾರ್ಥಿಗಳಲ್ಲಿಯೂ ಸಹ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು.<br>4. ನಿಲಯಾರ್ಥಿಗಳು ಕಸವನ್ನು ಹಸಿ ಕಸ ಮತ್ತು ಒಣ ಕಸವೆಂದು ವಿಂಗಡಿಸುವುದು ಹಾಗೂ ಆಹಾರ ತ್ಯಾಜ್ಯವನ್ನು ನಿಗದಿಪಡಿಸಿದ ಕಸ ಶೇಖರಣಾ ಡಬ್ಬಿಗಳಲ್ಲಿಯೇ ಹಾಕುವಂತೆ ಪ್ರೇರೇಪಿಸುವುದು.<br>5. ಸ್ವಚ್ಛತೆ ಬಗ್ಗೆ ವಾರ್ಡನ್ ಹಾಗೂ ನಿಲಯದ ಸಿಬ್ಬಂದಿಯೊಂದಿಗೆ ಸಹಕರಿಸುವುದು. |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

05/01/2023
(ಎಂ.ಜಿ ವೆಂಕಟೇಶಯ್ಯ)
ಸರ್ಕಾರದ ಉಪ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

<u>ಇವರಿಗೆ:-</u>

1. ಮಹಾಲೇಖಪಾಲರು (ಎ&ಇ ಲೆಕ್ಕ ಪರಿಶೋಧನೆ 1,2) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
4. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
5. ರಾಜ್ಯದ ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ.
6. ರಾಜ್ಯದ ಎಲ್ಲಾ ತಾಲ್ಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ (ಕ್ರ.ಸಂ 3 ರಿಂದ 6 ರವರೆಗೆ ಆಯುಕ್ತರ ಮುಖಾಂತರ).
7. ಕಲ್ಯಾಣ ಕೇಂದ್ರ, 24/7 Helpdesk, ಸಮಾಜ ಕಲ್ಯಾಣ ಇಲಾಖೆ, ಯವನಿಕ ಆವರಣ, ನೃಪತುಂಗ ರಸ್ತೆ, ಡಾ|| ಬಿ.ಆರ್ ಅಂಬೇಡ್ಕರ್ ವೀಧಿ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

<u>ಪ್ರತಿ ಮಾಹಿತಿಗಾಗಿ:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ
2. ಸರ್ಕಾರದ ಉಪ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸಸೌಧ.

*****

2. ನಿಲಯಕ್ಕೆ ದಾಖಲಾಗಿರುವ ಎಲ್ಲಾ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಸದರಿ ಸಮಿತಿಗಳಲ್ಲಿ ತೊಡಗಿಸಿಕೊಳ್ಳುವುದು.
3. ಪ್ರತಿ ಸಮಿತಿಯಲ್ಲಿ ಕನಿಷ್ಟ ಶೇ.10 ಸದಸ್ಯರನ್ನೊಳಗೊಂಡಂತೆ ಸಮಿತಿಯನ್ನು ರಚಿಸುವುದು.
4. ಈ ಎರಡು ಸಮಿತಿಗಳಿಗೆ Random ಆಗಿ SHP ತಂತ್ರಾಂಶದ ಮೂಲಕವೇ ವಿದ್ಯಾರ್ಥಿಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಲು ಆಯ್ಕೆ ತಂತ್ರಾಂಶ ರೂಪಿಸಿ, State Hostel Portal ನಲ್ಲಿಯೇ ಸ್ವಯಂಚಾಲಿತವಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲು ತಂತ್ರಾಂಶದಲ್ಲಿ ಅವಕಾಶ ಮಾಡಿಕೊಡುವುದು.
5. ಪ್ರತಿ ಮಾಹೆ, ಸಮಿತಿಯ ಸದಸ್ಯರನ್ನು ಬದಲಾಯಿಸುವುದು.
6. ಪ್ರತಿ ವರ್ಷದ ಪ್ರಾರಂಭದಲ್ಲಿಯೇ ನಿಲಯದ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ, ಆ ಆರ್ಥಿಕ ವರ್ಷದ ಎಲ್ಲಾ ಮಾಹೆಗಳಿಗೂ ಸಹ ಸಮಿತಿ ಸದಸ್ಯರ ಪಟ್ಟಿಯನ್ನು Online ನಲ್ಲಿ Generate ಮಾಡುವುದು.
7. ಪ್ರತಿ ಮಾಹೆ ನೊಟೀಸ್ ಬೋರ್ಡಿನಲ್ಲಿ ಎರಡೂ ಸಮಿತಿಯ ಸದಸ್ಯರ ಮಾಹಿತಿ ನೀಡುವುದು ಹಾಗೂ ಸಮಿತಿಯ ಜವಾಬ್ದಾರಿಗಳನ್ನು ನಿಲಯದ ನೋಟೀಸ್ ಬೋರ್ಡಿನಲ್ಲಿ ಹಾಕುವುದು.
8. ಪ್ರತಿ ವಿದ್ಯಾರ್ಥಿ ನಿಲಯದಲ್ಲಿ ಎಲ್ಲಾ ದೂರುಗಳ ನಿರ್ವಹಣೆಗಾಗಿ ಕಡ್ಡಾಯವಾಗಿ ಸಲಹಾ ಪೆಟ್ಟಿಗೆಯನ್ನು ನಿರ್ವಹಣೆ ಮಾಡತಕ್ಕದ್ದು ಹಾಗೂ ಪ್ರತಿ ಸೋಮವಾರ ಸದರಿ ಪೆಟ್ಟಿಗೆಯನ್ನು ತೆರೆದು ಸಲ್ಲಿಕೆಯಾಗಿರುವ ದೂರುಗಳ ಪರಿಹಾರಕ್ಕಾಗಿ ಸೂಕ್ತ ಕ್ರಮವಹಿಸುವುದು.
9. ಸಮಿತಿಗಳಿಗೆ ಈ ಕೆಳಕಂಡಂತೆ ಜವಾಬ್ದಾರಿಗಳನ್ನು ವಹಿಸುವುದು.

| | |
|---|---|
| Mess Committee | 1. ಮಾಹೆಯಾನ ಬೇಡಿಕೆ ಪಟ್ಟಿಯಂತೆ ಗುಣಮಟ್ಟದ ಆಹಾರ ಸಾಮಗ್ರಿಗಳು ನಿಲಯಕ್ಕೆ ಸರಬರಾಜಾಗಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.<br>2. ಮೆನು ಚಾರ್ಟಿನಂತೆ ಆಹಾರ ವಿತರಣೆ ಮಾಡುವ ಬಗ್ಗೆ ಖಾತ್ರಿ ಪಡಿಸಿಕೊಳ್ಳುವುದು.<br>3. ಆಹಾರ ತಯಾರಿಕೆಯ ಗುಣಮಟ್ಟದ ಬಗ್ಗೆ ಹಾಗೂ ತಯಾರಿಕೆಯಲ್ಲಿ ಸ್ವಚ್ಛತೆ ನಿರ್ವಹಣೆ ಬಗ್ಗೆ ನಿಗಾವಹಿಸುವುದು.<br>4. ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಊಟವನ್ನು ಕೋಣೆಗೆ ತೆಗೆದುಕೊಂಡು ಹೋಗದಂತೆ ತಮ್ಮ ಸಹಪಾಠಿಗಳಲ್ಲಿ ಅರಿವು ಮೂಡಿಸುವುದು.<br>5. ನಿಲಯಾರ್ಥಿಗಳು ಅನ್ಯ ವ್ಯಕ್ತಿಗಳನ್ನು ನಿಲಯಕ್ಕೆ ಊಟಕ್ಕೆ ಕರೆತಂದಾಗ ಅಂತಹ ಘಟನೆಗಳ ಬಗ್ಗೆ ವಾರ್ಡನ್ ಗಮನಕ್ಕೆ ತಂದು, ಆ ರೀತಿಯ ಘಟನೆಗಳು ಮರುಕಳುಹಿಸದಂತೆ ನಿಲಯಾರ್ಥಿಗಳಿಗೆ ತಿಳಿಸುವುದು.<br>6. ಆಹಾರ ತಯಾರಿಕೆ ಸಂಬಂಧ ವಾರ್ಡನ್ ಹಾಗೂ ನಿಲಯದ ಸಿಬ್ಬಂದಿಯೊಂದಿಗೆ ಸಹಕರಿಸುವುದು. |

1. ಈ ಕೂಡಲೇ ಜಾರಿಗೆ ಬರುವಂತೆ ಎಲ್ಲಾ ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳಲ್ಲಿ ನಿಗದಿತ ನಮೂನೆಯಲ್ಲಿ Taste Register (ರುಚಿ ಪರಿಶೀಲನಾ ವಹಿ) ಅನ್ನು ನಿರ್ವಹಣೆ ಮಾಡುವುದು.

| ದಿನಾಂಕ | ಊಟದ ಪ್ರಕಾರ | ವಿತರಿಸಿದ ಸಮಯ | ಮೆನು | ಆಹಾರದ ರುಚಿ (ಅಸಾಧಾರಣ / ಸಾಧಾರಣ / ತೃಪ್ತಿಕರ / ಕಳಪೆ | ರುಚಿ ಸರಿ ಇಲ್ಲದೇ ಇದ್ದಲ್ಲಿ ಯಾವ ಪದಾರ್ಥದ ರುಚಿ ಕಳಪೆ ಇರುತ್ತದೆ | ಪರಿಶೀಲಿಸಿದ ಆಹಾರ ಸಮಿತಿ ಸದಸ್ಯರ ಹೆಸರು ಮತ್ತು ಸಹಿ | ವಾರ್ಡನ್ ದೃಢೀಕರಣ |
|---|---|---|---|---|---|---|---|
| | ಬೆಳಗ್ಗೆ | | | | | | |
| | ಮಧ್ಯಾಹ್ನ | | | | | | |
| | ಸಂಜೆ | | | | | | |
| | ರಾತ್ರಿ | | | | | | |
| | | | | | | | |

2. ದಿನಂಪ್ರತಿ ಬೆಳಗ್ಗೆ, ಮಧ್ಯಾಹ್ನ, ಸಂಜೆ ಹಾಗೂ ರಾತ್ರಿ ವಿತರಣೆ ಮಾಡಿದ ಆಹಾರದ ರುಚಿಯ ಬಗ್ಗೆ ಮೆನು ಚಾರ್ಟಿನಂತೆ ಇರುವ ಬಗ್ಗೆ ಹಾಗೂ ಗುಣಮಟ್ಟದ ಬಗ್ಗೆ ಅಭಿಪ್ರಾಯವನ್ನು ಆಹಾರ ಸಮಿತಿಯ ಕನಿಷ್ಠ ಇಬ್ಬರು ಸದಸ್ಯರಿಂದ ಅವರ ಸ್ವಯಂ ಹಸ್ತಾಕ್ಷರದಲ್ಲಿ ಪಡೆಯಬೇಕು ಹಾಗೂ ನಿಲಯದ ಸೀನಿಯರ್ ವಾರ್ಡನ್ / ವಾರ್ಡನ್ / ದೃಢೀಕರಿಸಬೇಕು.
3. ಆಯಾಯ ದಿನ ಬೆಳಗ್ಗೆ ಮಧ್ಯಾಹ್ನ, ಸಂಜೆ ಹಾಗೂ ರಾತ್ರಿ ಸಿದ್ಧಪಡಿಸಿದ ಆಹಾರವನ್ನು ಮಾದರಿಗಾಗಿ ವಾರ್ಡನ್ ಕಛೇರಿಯಲ್ಲಿ ಈ ಕೆಳಗಿನಂತೆ ತೆಗೆದಿಡಬೇಕು:

| ಬೆಳಗ್ಗೆ / ಮಧ್ಯಾಹ್ನ / ಸಂಜೆ / ರಾತ್ರಿ | ಎಷ್ಟು ಸಮಯದವರೆಗೆ ಸಂರಕ್ಷಿಸಿಡಬೇಕು |
|---|---|
| ಬೆಳಗಿನ ಉಪಹಾರ | ಅದೇ ದಿನ ಮಧ್ಯಾಹ್ನದ ಊಟದ ವರೆಗೆ |
| ಮಧ್ಯಾಹ್ನದ ಊಟ | ಅದೇ ದಿನ ಸಂಜೆಯ ಲಘು ಉಪಹಾರದ ವರೆಗೆ |
| ಸಂಜೆಯ ಲಘು ಉಪಹಾರ | ಅದೇ ದಿನ ರಾತ್ರಿ ಊಟದ ವರೆಗೆ |
| ರಾತ್ರಿ ಊಟ | ಮರುದಿನ ಬೆಳಗಿನ ಉಪಹಾರದ ವರೆಗೆ |

4. ಒಂದು ವೇಳೆ ಕಲುಷಿತ ಆಹಾರದ ಪ್ರಕರಣಗಳು ಕಂಡುಬಂದಲ್ಲಿ ಕೂಡಲೇ, ಮಾದರಿಗಾಗಿ ಸಂರಕ್ಷಿಸಿಟ್ಟ ಆಹಾರವನ್ನು ಮುಂದಿನ ಪರೀಕ್ಷೆಗಾಗಿ ಸಲ್ಲಿಸಲು ಕ್ರಮವಹಿಸುವುದು.

SWD/SCHC/SC/23/2023-DDE-SOCIAL WELFARE COMMISSIONER

1/48706 2023

ಕರ್ನಾಟಕ ಸರ್ಕಾರ

ಸಂ:SWD/SCHC/SC/23/2023/1184131 ಆಯುಕ್ತರ ಕಛೇರಿ, ಸಮಾಜ ಕಲ್ಯಾಣ ಇಲಾಖೆ
5ನೇಮಹಡಿ, ಬಹುಮಹಡಿಗಳ ಕಟ್ಟಡ
ಡಾ. ಬಿ. ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ: 19-09-2023

ಸುತ್ತೋಲೆ

ವಿಷಯ: ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳಲ್ಲಿ ಸಿದ್ಧಪಡಿಸಲಾಗುತ್ತಿರುವ ಆಹಾರದ ಗುಣಮಟ್ಟ ಕಾಯ್ದುಕೊಳ್ಳುವ ಸಂಬಂಧ Taste Register (ರುಚಿ ಪರಿಶೀಲನಾ ವಹಿ) ಅನ್ನು ನಿರ್ವಹಣೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಸಕಇ 55 ಪಕವಿ 2023, ದಿನಾಂಕ: 05.05.2023

ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತಿರುವ ಎಲ್ಲಾ ವಿದ್ಯಾರ್ಥಿನಿಲಯಗಳು ಹಾಗೂ ವಸತಿ ಶಾಲೆಗಳಲ್ಲಿ ವಿತರಣೆ ಮಾಡಲಾಗುತ್ತಿರುವ ಆಹಾರದ ಗುಣಮಟ್ಟದ ಬಗ್ಗೆ ಹಾಗೂ ಶುಚಿ-ರುಚಿಯ ಬಗ್ಗೆ ಹಲವಾರು ದೂರುಗಳು ಬರುತ್ತಿರುವ ಹಿನ್ನಲೆಯಲ್ಲಿ ಹಾಗೂ ಸದರಿ ದೂರುಗಳನ್ನು ಪರಿಹರಿಹರಿಸುವ ನಿಟ್ಟಿನಲ್ಲಿ ವಿದ್ಯಾರ್ಥಿನಿಲಯಗಳ ಸಹಭಾಗಿತ್ವದಲ್ಲಿಯೇ ನಿಲಯಗಳನ್ನು ನಿರ್ವಹಣೆ ಮಾಡುವ ದೃಷ್ಟಿಯಿಂದ ಉಲ್ಲೇಖದ ರೀತ್ಯಾ ಪ್ರತಿ ನಿಲಯದಲ್ಲಿ Mess Committee ಅನ್ನು ರಚಿಸಿ ಆದೇಶ ಹೊರಡಿಸಲಾಗಿರುತ್ತದೆ.

ಆದಾಗ್ಯೂ ಸದರಿ Mess Committee ಯ ಕಾರ್ಯನಿರ್ವಹಣೆ ತೃಪ್ತಿಕರವಾಗಿರುವುದಿಲ್ಲ. ಅಲ್ಲದೇ, ಪದೇ–ಪದೇ ಇಲಾಖಾ ಸಹಾಯವಾಣಿ ಮೂಲಕ ಕಲುಷಿತ ಆಹಾರ ಸೇವಿಇಸಿ ವಿದ್ಯಾರ್ಥಿಗಳು ಅಸ್ವಸ್ಥರಾಗುತ್ತಿರುವ ಬಗ್ಗೆ ದೂರುಗಳು ಸಲ್ಲಿಕೆಯಾಗುತ್ತಿದೆ. ಮುಂದುವರೆದು ಆಹಾರ ಸಮಿತಿಯು ನಿಲಯದ ನಿರ್ವಹಣೆಯಲ್ಲಿ ಭಾಗಿಯಾಗುತ್ತಿರುವುದಕ್ಕೆ ಯಾವುದೇ ದಾಖಲೀಕರಣವಾಗದೇ ಇರುವ ಅಂಶ ಕಂಡುಬಂದಿರುವ ಹಿನ್ನಲೆಯಲ್ಲಿ ಹಾಗೂ ಇಲಾಖಾ ವ್ಯಾಪ್ತಿಯಲ್ಲಿ ನಿರ್ವಹಣೆ ಮಾಡಲಾಗುತ್ತಿರುವ ಎಲ್ಲಾ ವಸತಿ ಶಾಲೆ ಹಾಗೂ ವಿದ್ಯಾರ್ಥಿನಿಲಯಗಳಲ್ಲಿ ವಿತರಣೆ ಮಾಡಲಾಗುತ್ತಿರುವ ಆಹಾರದಲ್ಲಿ ಶುಚಿ ಹಾಗೂ ರುಚಿಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಈ ಕೂಡಲೇ ಜಾರಿಗೆ ಬರುವಂತೆ ಎಲ್ಲಾ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಹಾಗೂ ವಸತಿ ಶಾಲೆಗಳಲ್ಲಿ Taste Register (ರುಚಿ ಪರಿಶೀಲನಾ ವಹಿ) ಅನ್ನು ನಿರ್ವಹಣೆ ಮಾಡುವ ಸಂಬಂಧ ಈ ಕೆಳಗಿನಂತೆ ಸೂಚಿಸಿದೆ:

5. ಸಹಾಯಕ ನಿರ್ದೇಶಕರು (ಗ್ರೇಡ-1/2), ಸಮಾಜ ಕಲ್ಯಾಣ ಇಲಾಖೆ, ಎಲ್ಲಾ ತಾಲ್ಲೂಕುಗಳು (ಅಪರ / ಜಂಟಿ / ಉಪ ನಿರ್ದೇಶಕರ ಮುಖಾಂತರ)
6. ಕಛೇರಿ ಪ್ರತಿ

5. ವಿದ್ಯಾರ್ಥಿನಿಲಯಗಳ ಪರಿವೀಕ್ಷಣೆಗೆ ಆಗಮಿಸುವ ಇಲಾಖಾ ಅಧಿಕಾರಿಗಳು / ಲೋಕಾಯುಕ್ತ ಜಿಲ್ಲೆಯ ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಜಿಲ್ಲಾ ನೋಡಲ್ ಅಧಿಕಾರಿಗಳು ಹಾಗೂ ಇತರೆ ಸಕ್ಷಮಪ್ರಾಧಿಕಾರಿಗಳ ಸಮ್ಮುಖ Taste Register (ರುಚಿ ಪರಿಶೀಲನಾ ವಹಿ) ಅನ್ನು ಹಾಜರುಪಡಿಸತಕ್ಕದ್ದು.
6. ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರು ಪ್ರತಿ ವಾರ ತಮ್ಮ ವ್ಯಾಪ್ತಿಯ ಎಲ್ಲಾ ನಿಲಯಗಳ Taste Register (ರುಚಿ ಪರಿಶೀಲನಾ ವಹಿ) ಗಳನ್ನು ಪರಿಶೀಲಿಸಿ ಪ್ರತಿ ವಾರ ಸಂಬಂಧಿಸಿದ ಜಿಲ್ಲಾ ಮಟ್ಟದ ಜಂಟಿ / ಉಪನಿರ್ದೇಶಕರಿಗೆ ವರದಿ ಸಲ್ಲಿಸಬೇಕು.

| ತಾಲ್ಲೂಕು | ಭೇಟಿ ನೀಡಿದ ನಿಲಯದ ಹೆಸರು | ವರದಿ ಮಾಡುವ ವಾರದಲ್ಲಿ ಕಳಪೆ ರುಚಿ ಎಂದು ಕಂಡು ಬಂದ ದಿನಗಳ ಸಂಖ್ಯೆ | ವರದಿ ಮಾಡುವ ವಾರದಲ್ಲಿ ಸಾಧಾರಣ ರುಚಿ ಎಂದು ಕಂಡು ಬಂದ ದಿನಗಳ ಸಂಖ್ಯೆ | ವರದಿ ಮಾಡುವ ವಾರದಲ್ಲಿ ಅಸಾಧಾರಣ ರುಚಿ ಎಂದು ಕಂಡು ಬಂದ ದಿನಗಳ ಸಂಖ್ಯೆ | ವರದಿ ಮಾಡುವ ವಾರದಲ್ಲಿ ತೃಪ್ತಿಕರ ರುಚಿ ಎಂದು ಕಂಡು ಬಂದ ದಿನಗಳ ಸಂಖ್ಯೆ |
|---|---|---|---|---|---|

7. ಪ್ರತಿ ವಾರ ತಾಲ್ಲೂಕಿನಿಂದ ವರದಿ ಸಲ್ಲಿಕೆಯಾದ ಮೇಲೆ, ಜಿಲ್ಲಾ ಮಟ್ಟದ ಅಧಿಕಾರಿಗಳು ಹೆಚ್ಚ ಕಳಪೆ ರುಚಿ / ಸಾಧಾರಣ ರುಚಿ ಹೊಂದಿರುವ ವಿದ್ಯಾರ್ಥಿನಿಲಯಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ ಕೇಂದ್ರ ಕಛೇರಿಗೆ ವರದಿ ಮಾಡುವುದು. ಹಾಗೂ ಭೇಟಿ ಸಮಯದಲ್ಲಿ, Taste Register (ರುಚಿ ಪರಿಶೀಲನಾ ವಹಿ) ಗಳಲ್ಲಿ ನಮೂದಿಸಿದ ಮೆನುವಿಗೂ ಹಾಗೂ ಇಲಾಖೆಯಿಂದ ನಿಗದಿಪಡಿಸಿದ ಮೆನುವಿಗೂ ವ್ಯತ್ಯಾಸಗಳಿದ್ದಲ್ಲಿ ಈ ಬಗ್ಗೆ ಕೂಡಲೇ ಕೇಂದ್ರ ಕಛೇರಿಗೆ ವರದಿ ಮಾಡುವುದು.

Signed by
Rakesh Kumar K
Date: 10-09-2023 20:09:53
ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ
ಬೆಂಗಳೂರು

<u>ಪ್ರತಿಯನ್ನು</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು
2. ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು
3. ಎಲ್ಲಾ ಜಿಲ್ಲೆಗಳ ನೋಡಲ್ ಅಧಿಕಾರಿಗಳು
4. ಅಪರ / ಜಂಟಿ / ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ______________ ಜಿಲ್ಲೆ

| | | |
|---|---|---|
| 03 | ಮಂಗಳ ಕೆ ಎಂ.<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ. | ಕೋಲಾರ |
| 04 | ಚಂದ್ರನಾಯ್ಕ್<br>ನಿರ್ದೇಶಕರು,<br>ಡಾ|| ಬಾಬು ಜಗಜೀವನ್ ರಾಂ ಸಂಶೋಧನಾ ಸಂಸ್ಥೆ | ಶಿವಮೊಗ್ಗ |
| 05 | ಅರ್ಚನಾ<br>ಅಪರ ನಿರ್ದೇಶಕರು (ಮೀಸಲಾತಿ ಜಾರಿ ಕೋಶ),<br>ಸಮಾಜ ಕಲ್ಯಾಣ ಇಲಾಖೆ. | ತುಮಕೂರು |
| 06 | ವಾಣಿ<br>ಅಪರ ನಿರ್ದೇಶಕರು (ಮೂಲ ಸೌಕರ್ಯ)<br>ಸಮಾಜ ಕಲ್ಯಾಣ ಇಲಾಖೆ | ಬೆಂಗಳೂರು ನಗರ ಜಿಲ್ಲೆ |
| 07 | ಸುಮಯ್ಯ ರೂಹಿ,<br>ಜಂಟಿ ನಿರ್ದೇಶಕರು,<br>ಎಸ್‌ಸಿಎಸ್‌ಪಿ/ ಟಿಎಸ್‌ಪಿ ಕೋಶ,<br>ಸಮಾಜ ಕಲ್ಯಾಣ ಇಲಾಖೆ. | ರಾಮನಗರ |
| 08 | ಮಲ್ಲಿಕಾರ್ಜುನ ಕೆ ಬಿ.<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ. | ಚಿಕ್ಕಬಳ್ಳಾಪುರ |
| 09 | ಸುರೇಶ್ ನಾಯ್ಕ್,<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ. | ದಾವಣಗೆರೆ |
| 10 | ಊರ್ಮಿಳಾ. ಬಿ<br>ನಿರ್ದೇಶಕರು,<br>ಎಸ್‌ಸಿಎಸ್‌ಪಿ/ಟಿಎಸ್‌ಪಿ ಕೋಶ,<br>ಸಮಾಜ ಕಲ್ಯಾಣ ಇಲಾಖೆ. | ಚಿಕ್ಕಮಗಳೂರು |
| 11 | ಊರ್ಮಿಳಾ. ಬಿ<br>ನಿರ್ದೇಶಕರು,<br>ಎಸ್‌ಸಿಎಸ್‌ಪಿ/ಟಿಎಸ್‌ಪಿ ಕೋಶ,<br>ಸಮಾಜ ಕಲ್ಯಾಣ ಇಲಾಖೆ. | ಉಡುಪಿ |
| 12 | ನಾಗರಾಜ ಶೇರೆಗಾರ.<br>ಮುಖ್ಯ ಲೆಕ್ಕಾಧಿಕಾರಿ (C.A.O),<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. | ದಕ್ಷಿಣ ಕನ್ನಡ |
| 13 | ರಾಜೇಶ್ ಗೌಡ,<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,<br>ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು<br>(ಅಪರ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ) | ಕೊಡಗು |
| 14 | ಡಾ|| ಜಿ.ಪಿ.ದೇವರಾಜ್<br>ಜಂಟಿ ನಿರ್ದೇಶಕರು (ಶಿಕ್ಷಣ),<br>ಸಮಾಜ ಕಲ್ಯಾಣ ಇಲಾಖೆ. | ಹಾಸನ |

29

ಕರ್ನಾಟಕ ಸರ್ಕಾರ

ಸಂಖ್ಯೆ: 198 ಆರ್ & ಐ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 07-11-2023

## ಅಧಿಕೃತ ಜ್ಞಾಪನ

**ವಿಷಯ:** ಸಮಾಜ ಕಲ್ಯಾಣ ಇಲಾಖೆವತಿಯಿಂದ ಅನುಷ್ಠಾನ ಗೊಳಿಸುತ್ತಿರುವ ಯೋಜನೆ, ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ನಡೆಸಲು ರಾಜ್ಯ ಮಟ್ಟದ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳಾಗಿ ನೇಮಿಸುವ ಬಗ್ಗೆ.

**ಉಲ್ಲೇಖ:** 1. ಅಧಿಕೃತ ಜ್ಞಾಪನ ಸಂಖ್ಯೆ: ಸಕಇ/233/ಸಕಾ/2022, ದಿ:7-3-2022
2. ಅಧಿಕೃತ ಜ್ಞಾಪನ ಸಂಖ್ಯೆ: ಸಕಇ/198/ಆರ್&ಐ/2022, ದಿನಾಂಕ:1-12-2022
3. ಅಧಿಕೃತ ಜ್ಞಾಪನ ಸಂಖ್ಯೆ: ಸಕಇ/198/ಆರ್&ಐ/2022, ದಿನಾಂಕ:19-08-2022

ಸಮಾಜ ಕಲ್ಯಾಣ ಇಲಾಖೆವತಿಯಿಂದ ಪರಿಶಿಷ್ಟ ಜಾತಿಯವರ ಹಾಗೂ ಪರಿಶಿಷ್ಟ ಪಂಗಡದವರ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ/ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಯೋಜನೆ/ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಕೈಗೊಳ್ಳಲು ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ರಾಜ್ಯ ಮಟ್ಟದ ಅಧಿಕಾರಿಗಳನ್ನು ಪ್ರತಿ ಜಿಲ್ಲೆಗೆ ಒಬ್ಬರಂತೆ ನೋಡಲ್ ಅಧಿಕಾರಿಗಳನ್ನು ಉಲ್ಲೇಖ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ನೇಮಿಸಲಾಗಿತ್ತು. ತದನಂತರ ಉಲ್ಲೇಖ(2) & (3) ರಲ್ಲಿ ಕೆಲವು ಅಧಿಕಾರಿಗಳಿಗೆ ಜಿಲ್ಲೆಗಳನ್ನು ಬದಲಾಯಿಸಿ ನೇಮಿಸಲಾಗಿತ್ತು.

ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯ ನೋಡಲ್ ಅಧಿಕಾರಿಗಳಾಗಿ ನೇಮಿಸಲಾಗಿದ್ದ ಕೆಲವು ಅಧಿಕಾರಿಗಳು ವರ್ಗಾವಣೆಗೊಂಡಿರುವುದರಿಂದ ಹಾಗೂ ಪದನಾಮ ಬದಲಾವಣೆ ಆಗಿರುವುದರಿಂದ ಪ್ರತಿ ಜಿಲ್ಲೆಯ ಯೋಜನೆ ಪರಿಶೀಲನೆಗೆ ನೋಡಲ್ ಅಧಿಕಾರಿಗಳ ಬದಲಾವಣೆ/ಬದಲಾದ ಪದನಾಮದೊಂದಿಗೆ ಈ ಕೆಳಗಿನಂತೆ ನೇಮಿಸಿ ಆದೇಶಿಸಿದೆ.

| ಕ್ರ. ಸಂ. | ಅಧಿಕಾರಿಗಳ ಹೆಸರು ಮತ್ತು ಹುದ್ದೆಯ ಪದನಾಮ (ಶ್ರೀಯುತ/ಶ್ರೀಮತಿ) | ಹಂಚಿಕೆ ಮಾಡಲಾದ ಜಿಲ್ಲೆಗಳು |
|---|---|---|
| 01 | ಸತ್ಯಶ್ರೀ. ಆರ್<br>ಅಪರ ನಿರ್ದೇಶಕರು (ಆಡಳಿತ),<br>ಸಮಾಜ ಕಲ್ಯಾಣ ಇಲಾಖೆ. | ಬೆಂಗಳೂರು ಗ್ರಾಮಾಂತರ |
| 02 | ಚಂದ್ರಕಲಾ<br>ಕಾರ್ಯದರ್ಶಿ,<br>ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ. | ಚಿತ್ರದುರ್ಗ |

--2

ಉ೨



| | | |
|---|---|---|
| 28 | ಡಾ|| ಹೆಚ್. ಎಸ್. ಶಿವರಾಂ,<br>ಕಾರ್ಯದರ್ಶಿ,<br>ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು. | ಕೊಪ್ಪಳ |
| 29 | ಜನಾರ್ಧನ್,<br>ಅಧೀಕ್ಷಕ ಅಭಿಯಂತರರು.<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. | ಬಳ್ಳಾರಿ |
| 30 | ಜನಾರ್ಧನ್,<br>ಅಧೀಕ್ಷಕ ಅಭಿಯಂತರರು,<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. | ವಿಜಯನಗರ |
| 31 | ಸುರೇಶ್ ನಾಯ್ಕ್,<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ. | ಯಾದಗಿರಿ |

ಜಿಲ್ಲೆಯ ಸಮಗ್ರ ಮೇಲ್ವಿಚಾರಣೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧೀನದ ಶಾಲೆ/ವಸತಿ ಶಾಲೆ/ವಿದ್ಯಾರ್ಥಿನಿಲಯಗಳಲ್ಲಿನ ಆಹಾರದ ಗುಣಮಟ್ಟವನ್ನು ಸ್ವಯಂ ಅಥವಾ ಯಾವುದಾದರೂ ದೂರಿನ ಮೇರೆಗೆ ಸಹಾಯಕ ಆಯುಕ್ತರು ಸಂಬಂಧಪಟ್ಟ ಕಂದಾಯ ಉಪ ವಿಭಾಗದ ಸಮನ್ವಯದೊಂದಿಗೆ ಪರೀಕ್ಷಿಸುವುದು. ಉಳಿದಂತೆ, ಉಲ್ಲೇಖಿತ(1)ರ ಅಧಿಕೃತ ಜ್ಞಾಪನದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

7/11/೨೩

(ಜ್ಯೋತಿ ಎಂ.ಎಸ್)
ಸರ್ಕಾರದ ಉಪ ಕಾರ್ಯದರ್ಶಿ-1,
ಸಮಾಜ ಕಲ್ಯಾಣ ಇಲಾಖೆ.

7/11/2023

**ಇವರಿಗೆ:**

1. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
4. ರಾಜ್ಯದ ಎಲ್ಲಾ ಜಿಲ್ಲೆಗಳ ಮುಖ್ಯಕಾರ್ಯನಿರ್ವಹಾಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
5. ಎಲ್ಲಾ ಜಿಲ್ಲೆಗಳ ನೋಡಲ್ ಅಧಿಕಾರಿಗಳಿಗೆ.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ 1 , 2 & 3 ರವರು ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
3. ಸರ್ಕಾರದ ಅಧೀನ ಕಾರ್ಯದರ್ಶಿ 1 , 2 & 3, ಸಮಾಜ ಕಲ್ಯಾಣ ಇಲಾಖೆ.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

| | | |
|---|---|---|
| 15 | ಪ್ರತಿಭಾ,<br>ಜಂಟಿ ನಿರ್ದೇಶಕರು(ಆಡಳಿತ),<br>ಸಮಾಜ ಕಲ್ಯಾಣ ಇಲಾಖೆ | ಚಾಮರಾಜನಗರ |
| 16 | ಎನ್ ರಾಜು,<br>ಪ್ರಧಾನ ವ್ಯವಸ್ಥಾಪಕರು (ಹಣಕಾಸು),<br>ಡಾ\|\|ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ. | ಮಂಡ್ಯ |
| 17 | ಕಲ್ಲೇಶ್,<br>ನಿರ್ದೇಶಕರು(ಪ್ರಭಾರ),<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ. | ಮೈಸೂರು |
| 18 | ನಾಗೇಶ್ ಪಿ,<br>ವ್ಯವಸ್ಥಾಪಕ ನಿರ್ದೇಶಕರು,<br>ಡಾ\|\| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಹಾವೇರಿ |
| 19 | ನಾಗೇಶ್ ಪಿ,<br>ವ್ಯವಸ್ಥಾಪಕ ನಿರ್ದೇಶಕರು,<br>ಡಾ\|\| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | ಗದಗ |
| 20 | ರಾಜ್‌ಕುಮಾರ್,<br>ಜಂಟಿ ನಿರ್ದೇಶಕರು,<br>ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | ಬೆಳಗಾವಿ |
| 21 | ಡಾ\|\| ಸಾಬೀರ್ ಅಹಮದ್ ಮುಲ್ಲಾ<br>ಮುಖ್ಯ ಆಡಳಿತಾಧಿಕಾರಿ,<br>ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು | ಉತ್ತರ ಕನ್ನಡ |
| 22 | ಸಾಬೀರ್ ಅಹಮದ್ ಮುಲ್ಲಾ<br>ಮುಖ್ಯ ಆಡಳಿತಾಧಿಕಾರಿ,<br>ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು. | ಧಾರವಾಡ |
| 23 | ಮಾಯಾದೇವಿ ಗಲಗಲಿ<br>ಜಂಟಿ ನಿರ್ದೇಶಕರು (ಆಡಳಿತ),<br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ. | ವಿಜಯಪುರ |
| 24 | ಪುರುಷೋತ್ತಮ<br>ಜಂಟಿ ನಿರ್ದೇಶಕರು (ಮೂ.ಸೌ.ಶಾಖೆ),<br>ಸಮಾಜ ಕಲ್ಯಾಣ ಇಲಾಖೆ. | ಬಾಗಲಕೋಟ |
| 25 | ಎಂ ಗಣೇಶಪ್ಪ,<br>ಕಾರ್ಯದರ್ಶಿ,<br>ಕೇಂದ್ರ ಪರಿಹಾರ ಸಮಿತಿ. | ರಾಯಚೂರು |
| 26 | ಶಿವಶಂಕರ್ ನಾಯ್ಕ್ ಎಲ್,<br>ವ್ಯವಸ್ಥಾಪ ನಿರ್ದೇಶಕರು,<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | ಕಲಬುರ್ಗಿ |
| 27 | ಶಿವಶಂಕರ್ ನಾಯ್ಕ್ ಎಲ್,<br>ವ್ಯವಸ್ಥಾಪ ನಿರ್ದೇಶಕರು,<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ | ಬೀದರ್ |

1. ಆಹಾರ ಪದಾರ್ಥಗಳ ವರ್ಗೀಕರಣ:-

ಹಾಲಿ ಇರುವ ಗುಂಪುಗಳನ್ನು ಈ ಕೆಳಗಿನಂತೆ ವರ್ಗೀಕರಣ ಮಾಡುವುದು ಸೂಕ್ತವಾಗಿರುತ್ತದೆ:-

| | | |
|---|---|---|
| 1 | ಗ್ರೂಪ್-ಎ ಪದಾರ್ಥಗಳು | ಅಕ್ಕಿ, ರಾಗಿ, ಜೋಳ, ಗೋಧಿ, ಬನ್ಸಿ ರವೆ, ಸಣ್ಣ ರವೆ, ಅವಲಕ್ಕಿ, ಬೆಲ್ಲ, ಸಕ್ಕರೆ, ಧನಿಯ ಒಣಮೆಣಸಿನಕಾಯಿ ಗುಂಟೂರು, ಒಣಮೆಣಸಿನಕಾಯಿ ಬ್ಯಾಡಗಿ, ಹುಣಸೇ ಹಣ್ಣು, ಪುಡಿ ಉಪ್ಪು, ಕಲ್ಲುಪ್ಪು, ಅಡುಗೆ ಎಣ್ಣೆ, ಒಣಕೊಬ್ಬರಿ, ತೊಗರಿಬೇಳೆ, ಕಡಲೇ ಬೇಳೆ, ಉದ್ದಿನ ಬೇಳೆ, ಅವರೇ ಬೇಳೆ, ಹೆಸರು ಬೇಳೇ, ಹೆಸರುಕಾಳು, ಅಲಸಂಧಿಕಾಳು, ಹುರಳಿಕಾಳು, ಅವರೇಕಾಳು, ಬಟಾಣಿ, ಕಡಲೇಕಾಳು, ಕಡಲೇಬೀಜ, ಮೈದಾ, ಇಡ್ಲಿರವೆ, ಕಾಫಿ ಪುಡಿ, ಟೀ ಪುಡಿ, ಬಾದಾಮಿ ಪುಡಿ, ಹುರಿಗಡಲೆ, ಸೋಯಾಬೀನ್, ಕಡಲೇ ಪುರಿ, ಶಾವಿಗೆ, ಜಾಮೂನ್ ಮಿಕ್ಸ್, ಬಿಸಿಬೇಳೆ ಬಾತ್ ಪುಡಿ, ಪುಳಿಯೋಗರೆ ಪುಡಿ, ವಾಂಗಿಬಾತ್ ಪುಡಿ, ಹಪ್ಪಳ, ಅಡುಗೆ ಸೋಡಾ, ಸಬ್ಬಕ್ಕಿ, HORLICKS, BOURNVITA, ಕಾಬೂಲ್ ಕಡಲೆ, ಕಡಲೇ ಹಿಟ್ಟು, ಅಕ್ಕಿ ಹಿಟ್ಟು, Biscuit ಹಾಗೂ ಇತರೆ ದಿನಸಿ ಸಾಮಗ್ರಿಗಳು. |
| 2 | ಗ್ರೂಪ್-ಬಿ ಪದಾರ್ಥಗಳು | ಗೋಡಂಬಿ, ಒಣ ದ್ರಾಕ್ಷಿ, ಬಾದಾಮಿ, ಚೆಕ್ಕೆ, ಲವಂಗ, ಗಸ ಗಸೆ, ಮೆಂತ್ಯ, ಏಲಕ್ಕಿ, ಕರಿಮೆಣಸು, ಸಾಸಿವೆ, ಜೀರಿಗೆ ಅರಶಿನ ಪುಡಿ, ಇಂಗು ಬಿಳಿ ಎಳ್ಳು, ಉಪ್ಪಿನ ಕಾಯಿ, ಮರಾಠಿ ಮೊಗ್ಗು, ಪಲಾವು ಎಲೆ ಹಾಗೂ ಇತರೆ ಎಲ್ಲಾ ಮಸಾಲ ಪದಾರ್ಥಗಳು. |

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳು ಮತ್ತು ಸರ್ಕಾರಿ ವಸತಿ ಶಾಲೆಗಳಿಗೆ ಆಹಾರ ಸಾಮಗ್ರಿಗಳನ್ನು ಒದಗಿಸಲು ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ:ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2017, ದಿನಾಂಕ: 29.04.2019.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಇವರ ಏಕಕಡತ ಸಂಖ್ಯೆ: SWD/EDU/ED7/20/2023-EDN B-SOCIAL WELFARE COMMISSIONER

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರಿ ಆದೇಶದಲ್ಲಿ, ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳು ವ್ಯಾಪ್ತಿಯಡಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ವಸತಿ ಶಾಲೆ ಮತ್ತು ಆಶ್ರಮ ಶಾಲೆಗಳಿಗೆ ಆಹಾರ ಪದಾರ್ಥ ಮತ್ತು ಇತರ ಸಾಮಗ್ರಿಗಳನ್ನು ಜಿಲ್ಲಾ ಮಟ್ಟದ ಆಹಾರ ಪದಾರ್ಥಗಳ ಖರೀದಿ ಸಮಿತಿಯ ಮೂಲಕ ಒಂದೇ ಟೆಂಡರ್ ಆಹ್ವಾನಿಸಿ, ಸರಬರಾಜು ಮಾಡಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಏಕಕಡತದಲ್ಲಿ, ಸಮಾಜ ಕಲ್ಯಾಣ ಇಲಾಖೆಯು ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ವಸತಿ ಶಾಲೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಸರಬರಾಜು ಮಾಡಲು ಜಿಲ್ಲಾ ಮಟ್ಟದಲ್ಲಿ ಈಗಾಗಲೇ ಜಿಲ್ಲಾ ಸಮಿತಿ ರಚಿಸಲಾಗಿದ್ದು, ಹಾಲಿ ಇರುವ ಆಹಾರ ಪದಾರ್ಥಗಳ ಗುಂಪುಗಳನ್ನು ವೈಜ್ಞಾನಿಕವಾಗಿ ವಿಂಗಡಣೆ ಮಾಡಿ, ಸರ್ಕಾರದ ಆದೇಶ ಸಂಖ್ಯೆ: ಸಕಇ 738 ಪಕವಿ 2017, ದಿನಾಂಕ 29.04.2019ರ ಆದೇಶವನ್ನು ಪರಿಷ್ಕರಿಸಿ ನೂತನ ಆದೇಶವನ್ನು ಹೊರಡಿಸಬೇಕೆಂದು ವಿದ್ಯಾರ್ಥಿನಿಲಯಗಳಿಗೆ ಅವಶ್ಯವಿರುವ ಆಹಾರ ಪದಾರ್ಥಗಳನ್ನು ಟೆಂಡರ್ ಮೂಲಕ ಪಡೆಯಲು ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಕಾರ್ಯಾದೇಶ ನೀಡಲು ಸಾಧ್ಯವಾಗುತ್ತಿಲ್ಲ. ಹಲವಾರು ಪ್ರಕರಣಗಳಲ್ಲಿ ಕಾರ್ಯಾದೇಶಗಳನ್ನು ಪ್ರತಿ ವರ್ಷ October-Novermber ಗಳಲ್ಲಿ ನೀಡುತ್ತಿದ್ದು, ವೇಳಾಪಟ್ಟಿಯಲ್ಲಿ ಬದಲಾವಣೆಯಾಗಿರುತ್ತದೆ. ಈ ರೀತಿಯ ಕಾರಣಗಳಿಂದಾಗಿ, ಜಿಲ್ಲಾ ಹಂತದಲ್ಲಿಯೇ ಮತ್ತೊಂದು ವರ್ಷಕ್ಕೆ ಟೆಂಡರ್ ಅನ್ನು ವಿಸ್ತರಿಸುವುದು ಕಂಡುಬಂದಿರುತ್ತದೆ. ಈ ಹಿನ್ನಲೆಯಲ್ಲಿ, ಹಾಲಿ ಇರುವಂತೆ ಪ್ರತಿ ವರ್ಷ ಟೆಂಡರ್ ಕರೆಯುವ ಬದಲಾಗಿ, **ಪ್ರತಿ ಎರಡು ವರ್ಷಕ್ಕೊಮ್ಮೆ ಟೆಂಡರ್ ಕರೆಯಲು ಸೂಚಿಸಬಹುದಾಗಿದೆ.** ಇದರಿಂದಾಗಿ, ಎರಡು ವರ್ಷಗಳ ಅವಧಿಗೆ ಗುತ್ತಿಗೆ ದೊರೆಯುವುದರಿಂದ, ಉತ್ತಮ ಸಂಸ್ಥೆಗಳು / ಗುತ್ತಿಗೆದಾರರು ಟೆಂಡರಿನಲ್ಲಿ ಭಾಗವಹಿಸುವುದಲ್ಲದೇ, ಸ್ಪರ್ಧಾತ್ಮಕ ದರಗಳನ್ನು ನಮೂದಿಸಲು ಸಾಧ್ಯವಾಗುತ್ತದೆ.

3. ಹಾಲಿ ಇರುವ ಟೆಂಡರ್ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಪರಿಷ್ಕರಿಸುವುದು ಸೂಕ್ತವಾಗಿರುತ್ತದೆ.

| ಕ್ರ. ಸಂ | ಪ್ರಕ್ರಿಯೆ | ವೇಳಾಪಟ್ಟಿ |
|---|---|---|
| 1 | E Portal ಮೂಲಕ ಅಧಿಸೂಚನೆ ಹೊರಡಿಸುವುದು | 1 ನೇ ಜನವರಿ- ಪ್ರತಿ 2 ವರ್ಷಕ್ಕೊಮ್ಮೆ |
| 2 | E Portal ಮೂಲಕ ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಪ್ರಾರಂಭಿಸುವ ದಿನಾಂಕ | 1 ನೇ ಜನವರಿ- ಪ್ರತಿ 2 ವರ್ಷಕ್ಕೊಮ್ಮೆ |
| 3 | E Portal ಮೂಲಕ ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಕೊನೆಯ ದಿನಾಂಕ | 31 ನೇ ಜನವರಿ |
| 4 | ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ | 1 ನೇ ಫೆಬ್ರುವರಿ |
| 5 | ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಸಂಸ್ಥೆಯಿಂದ ಆಹಾರ ಪದಾರ್ಥಗಳ ಮಾದರಿಗಳನ್ನು ಪಡೆಯುವ ದಿನಾಂಕ | 15 ನೇ ಫೆಬ್ರುವರಿ |
| 6 | ಆರ್ಥಿಕ ಬಿಡ್ ಗಳನ್ನು ತೆರೆಯುವ ದಿನಾಂಕ | 17 ನೇ ಫೆಬ್ರುವರಿ |
| 7 | ಟೆಂಡರ್ ಪ್ರಕ್ರಿಯೆಯಲ್ಲಿ ಅಂತಿಮಗೊಂಡ ಪ್ರಸ್ತಾವನೆಯನ್ನು ಟೆಂಡರ್ ಅನುಮೋದನಾ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಅವಧಿ | 20 ನೇ ಫೆಬ್ರುವರಿ |
| 8 | ಆಯ್ಕೆಗೊಂಡವರಿಗೆ ಕಾರ್ಯಾದೇಶ ಹೊರಡಿಸುವ ಅವಧಿ | ಮಾರ್ಚ 10 ರೊಳಗೆ |

4. ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರುವ ಮೆಟ್ರಿಕ್ ಪೂರ್ವ, ನಂತರದ ನಿಲಯಗಳು ಹಾಗೂ ವಸತಿ ಶಾಲೆಗಳನ್ನು ಒಟ್ಟುಗೂಡಿಸಿ ಬೇಕಾಗಿರುವ ಆಹಾರ

| | | |
|---|---|---|
| 3 | ಗ್ರೂಪ್-ಸಿ ಪದಾರ್ಥಗಳು | ಹುರಳಿಕಾಯಿ, ಆಲೂಗಡ್ಡೆ, ಬೆಂಡೇಕಾಯಿ, ಟಮೋಟೊ, ಬದನೆಕಾಯಿ, ಕ್ಯಾರೆಟ್, ಬೀಟ್ರೋಟ್, ಕೋಸು, ಮೂಲಂಗಿ ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಕರಿಬೇವು, ಪುದೀನ, ಈರುಳ್ಳಿ, ಬೆಳ್ಳುಳ್ಳಿ, ಬಾಳೆಹಣ್ಣು, ಹೀರೇಕಾಯಿ, ತೊಂಡೆಕಾಯಿ, ನುಗ್ಗೇಕಾಯಿ, ಹಸಿಶುಂಠಿ, ಗೋರಿಕಾಯಿ, ಸಿಹಿ ಕುಂಬಳ, ಸೌತೆಕಾಯಿ, ಸಾಂಬಾರು ಸೌತೇಕಾಯಿ, ಸೊಪ್ಪು, ದಪ್ಪಮೆಣಸಿನಕಾಯಿ, ನಿಂಬೆಹಣ್ಣು, ತೆಂಗಿನಕಾಯಿ ಹಾಗೂ ಇತರೆ ತರಕಾರಿಗಳು. |
| 4 | ಗ್ರೂಪ್-ಡಿ ಪದಾರ್ಥಗಳು | ಹಾಲು, ಮೊಸರು, ತುಪ್ಪ, Bread ಮತ್ತು ಇತರೆ ಸಿಹಿ ತಿನಿಸುಗಳು. |
| 5 | ಗ್ರೂಪ್-ಇ ಪದಾರ್ಥಗಳು | ಕೋಳಿ ಮೊಟ್ಟೆ, ಕೋಳಿ ಮಾಂಸ. |
| 6 | ಗ್ರೂಪ್-ಎಫ್ ಪದಾರ್ಥಗಳು | LPG and LPG Trnasportation Charges and other items related to LPG. |
| 7 | ಗ್ರೂಪ್-ಜಿ ಪದಾರ್ಥಗಳು | MILLING CHARGES, RICE/WHEAT TRANSPORTATION CHARGES, and Food Items Cleaning charges. |
| 8 | ಗ್ರೂಪ್-ಹೆಚ್ ಪದಾರ್ಥಗಳು | ಅ) ಫಿನಾಯಿಲ್, ಆಸಿಡ್, ಬ್ಲೀಚಿಂಗ್ ಪೌಡರ್, ಸಬೀನಾ ಪೌಡರ್, HARPIC/DOMEX, MOP, BATHROOM BRUSH, TOILET BRUSH, DETERGENT POWDER, HANDWASH, DUSTBIN COVERS, WIPERS, VIM/PRIL/EXO,<br><br>ಕಡ್ಡಿ ಪೊರಕೆ, ಬಾಂಬೆ ಪೊರಕೆ, Plastic Bucket, Jug, Dust Pan , Dust Bin- Plastic, ಇತರೆ ಸ್ವಚ್ಛತಾ ಸಾಮಗ್ರಿಗಳು.<br>ಆ) Tube Light Set, CFL Bulb Tube Light Bulb. |

2. ಪ್ರಸ್ತುತ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯಲಾಗುತ್ತಿದ್ದು, ಅನೇಕ ಆಡಳಿತಾತ್ಮಕ ಕಾರಣಗಳಿಂದಾಗಿ ನಿಗಧಿತ ಸಮಯದಲ್ಲಿ ಟೆಂಡರ್ ಅನ್ನು ಆಹ್ವಾನಿಸಲು ಸಾಧ್ಯವಾಗುತ್ತಿಲ್ಲ ಹಾಗೂ ನಿಖರವಾgi ಆಖುತಿಕ ವರ್ಷಕ್ಕೆ ಸಂವಾದಿಯಾಗಿ

| | | |
|---|---|---|
| 4 | ಗ್ರೂಪ್-ಡಿ ಪದಾರ್ಥಗಳು | ಪ್ರತಿ ದಿನ |
| 5 | ಗ್ರೂಪ್-ಇ ಪದಾರ್ಥಗಳು | ಮೆನು ಚಾರ್ಟಿನಲ್ಲಿ ನಿಗದಿಪಸಿರುವಂತೆ, ವಿತರಣೆ ಮಾಡುವ ದಿನದಂದೇ ಸರಬರಾಜು ಮಾಡುವುದು |
| 6 | ಗ್ರೂಪ್-ಎಫ್ ಪದಾರ್ಥಗಳು | ಬೇಡಿಕೆಯಂತೆ |
| 7 | ಗ್ರೂಪ್-ಜಿ ಪದಾರ್ಥಗಳು | ಬೇಡಿಕೆಯಂತೆ |
| 8 | ಗ್ರೂಪ್-ಹೆಚ್ ಪದಾರ್ಥಗಳು | ಪ್ರತಿ ಮಾಹೆಯ 5ನೇ ತಾರೀಖಿನೊಳಗೆ |
| 9 | ಗ್ರೂಪ್-ಐ ಪದಾರ್ಥಗಳು | ಪ್ರತಿ ಮಾಹೆಯ 5ನೇ ತಾರೀಖಿನೊಳಗೆ |

9. ಇಲಾಖೆಯು e-Governance ರವರಿಂದ ಈ ಸಂಬಂಧ ಪ್ರತ್ಯೇಕ ತಂತ್ರಾಂಶವನ್ನು ರೂಪಿಸಿಕೊಂಡು, ಸಂಪೂರ್ಣ ಆಹಾರ ಸರಬರಾಜು ಪದ್ಧತಿಯ ಹಂತಗಳನ್ನು Online ನಲ್ಲಿ ದಾಖಲಿಸುವಂತೆ ಕ್ರಮವಹಿಸುವುದು (ಮಾಹೆಯಾನ ಆಹಾರ ಪದಾರ್ಥಗಳ ಬೇಡಿಕೆ ಸಲ್ಲಿಸುವುದರಿಂದ ಹಿಡಿದು, ವಿತರಣೆ ಮಾಡುವ ವರೆಗೂ ಎಲ್ಲಾ ಹಂತಗಳನ್ನು)

10. ಪ್ರತಿ ಮಾಹೆ, Online ಮೂಲಕವೇ Random ಆಗಿ 10 ನಿಲಯಗಳನ್ನು ಆಯ್ಕೆ ಮಾಡಿ, Samples ಗಳನ್ನು Lab Test ಗಾಗಿ ನಿಗದಿಪಡಿಸಿದ ಸಂಸ್ಥೆಗೆ ಸಲ್ಲಿಸಿ ವರದಿ ಪಡೆದು ಮುಂದಿನ ಕ್ರಮವಹಿಸುವುದು.

11. ಜಿಲ್ಲಾ ಮಟ್ಟದಲ್ಲಿ ಟೆಂಡರ್ ಅನ್ನು ಅಂತಿಮಗೊಳಿಸುವಾಗ ಸ್ಥಳೀಯ ವಹಿವಾಟುದಾರರಿಗೆ ಆದ್ಯತೆ ನೀಡುವುದು.

12. ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಡಿ ಬರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು, ವಸತಿ ಶಾಲೆಗಳಿಗೆ ಆಹಾರ ಪದಾರ್ಥ ಮತ್ತು ಇತರೆ ಸಾಮಗ್ರಿಗಳನ್ನು ಜಿಲ್ಲಾ ಮಟ್ಟದಲ್ಲಿ ಈ ಕೆಳಕಂಡ ಸಮಿತಿಯ ಮೂಲಕ ಒಂದೇ ಟೆಂಡರ್ ಆಹ್ವಾನಿಸಿ ಸರಬರಾಜು ಮಾಡಲು ಪ್ರಸ್ತಾಪಿಸಿರುತ್ತಾರೆ.

**ಜಿಲ್ಲಾ ಮಟ್ಟದ ಆಹಾರ ಪದಾರ್ಥಗಳ ಖರೀದಿ ಸಮಿತಿ.**

| | | |
|---|---|---|
| 1 | ಜಿಲ್ಲಾಧಿಕಾರಿ | ಅಧ್ಯಕ್ಷರು |
| 2 | ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ | ಸದಸ್ಯರು |

ಪದಾರ್ಥಗಳ ಒಟ್ಟು ಪರಿಮಾಣವನ್ನು ಲೆಕ್ಕ ಹಾಕಿ ತಾಲ್ಲೂಕುವಾರು ಟೆಂಡರುಗಳನ್ನು ಕರೆಯುವುದು.

5. ನಿಲಯಕ್ಕೆ ಅವಶ್ಯವಾಗಿರುವ LPG ಅನ್ನು ನೇರವಾಗಿ ಆಯಾಯ ಸರಬರಾಜು ಏಜೆನ್ಸಿಗೆ K2 ಮುಖಾಂತರ ವೆಚ್ಚವನ್ನು ಪಾವತಿ ಮಾಡಲು ತಾಲ್ಲುಕು ಮಟ್ಟದ ಅಧಿಕಾರಿಗಳು ಕ್ರಮವಹಿಸುವುದು.

6. ಆಸಕ್ತ ಟೆಂಡರುದಾರರು ಎಲ್ಲಾ ಗ್ರೂಪ್ ಗಳಿಗೂ ಸಹ ಕಡ್ಡಾಯವಾಗಿ ಬಿಡ್ ಮಾಡಬೇಕು

6. ಟೆಂಡರಿನಲ್ಲಿ ಒಂದು ವೇಳೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಭಾಗವಹಿಸಿದಲ್ಲಿ, ಅಂತಹ ಸಂಸ್ಥೆಗಳು ತಾವು ವಹಿವಾಟು ನಡೆಸುತ್ತಿರುವ ಪದಾರ್ಥಗಳ ಸಂಬಂಧ ಕೇವಲ ಒಂದೇ ಗ್ರೂಪಿಗೆ bid ಮಾಡಿದರೂ ಸಹ, ಅದನ್ನು ಪರಿಗಣಿಸಬೇಕು ಹಾಗೂ ಅಂತಹ ಸಮಯದಲ್ಲಿ ಗ್ರೂಪ್‌ವಾರು L1 ಅನ್ನು ಆಯ್ಕೆ ಮಾಡಬೇಕು.

7. ಮಾರುಕಟ್ಟೆ ದರಗಳಿಗೆ ತಾಳೆಯಾಗುವ ದರಗಳನ್ನು ನಮೂದಿಸಬೇಕು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಸಮಿತಿಯು ಈ ಸಂಬಂಧ ಕೆಳಕಂಡಂತೆ ಕ್ರಮವಹಿಸುವುದು.

| | |
|---|---|
| a | ಸದರಿ ಸಮಿತಿಯು APMC ಸೇರಿದಂತೆ ಇತರೆ ಎಲ್ಲಾ ಸಗಟು ಮಾರುಕಟ್ಟೆ, Super Market ಗಳಿಂದ ಪ್ರಚಲಿತದಲ್ಲಿರುವ ಮಾರುಕಟ್ಟೆ ದರಗಳನ್ನು ಪಡೆಯುವುದು. |
